10 Rs.

दस रुपये

सत्यमेव जयते

भारत

INDIA

१० रु.

10 Rs

TEN RUPEES

13515

BNG(U)BLR(S)/..........2002-2003

1-20

17815

ಶ್ರೀ

## ಒಟ್ಟು ಕುಟುಂಬದ ಆಸ್ತಿಯ ವಿಭಾಗ ಪತ್ರ

ಸನ್ ಎರಡು ಸಾವಿರದ ಮೂರನೇ ಇಸವಿ ಜನವರಿ ಮಾಹೆ ದಿನಾಂಕ ಹತ್ತರಲ್ಲು (10.01.2003) ಬೆಂಗಳೂರು ದಕ್ಷಿಣ ತಾಲ್ಲೂಕು, ವರ್ತೂರು ಹೋಬಳಿ, ತೂಬರಹಳ್ಳಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ನರಸಿಂಹಯ್ಯನ ಧರ್ಮಪತ್ನಿ ಸುಮಾರು 75 ವರ್ಷ ವಯಸ್ಸಿನ ಶ್ರೀಮತಿ.ಮುನಿಯಮ್ಮನವರು *1ನೇ ಪಾರ್ಟಿಯಾಗಿ* ಹಾಗೂ ಇವರ ಮಕ್ಕಳುಗಳಾದ 1ನೇ ಸುಮಾರು 54 ವರ್ಷ ವಯಸ್ಸಿನ ಶ್ರೀ.ಎನ್.ಕೃಷ್ಣರೆಡ್ಡಿರವರು *2ನೇ ಪಾರ್ಟಿಯಾಗಿ,* 2ನೇ ಸುಮಾರು 47 ವರ್ಷ ವಯಸ್ಸಿನ ಶ್ರೀ.ಎನ್.ನರಸಾರೆಡ್ಡಿರವರು *3ನೇ ಪಾರ್ಟಿಯಾಗಿ,* ಮತ್ತು 3ನೇ ಸುಮಾರು 40 ವರ್ಷ ವಯಸ್ಸಿನ ಶ್ರೀ.ಎನ್.ಅಶ್ವಥ್‌ನಾರಾಯಣ ರೆಡ್ಡಿರವರು *4ನೇ ಪಾರ್ಟಿಯಾಗಿ* ನಾವುಗಳು ಎಲ್ಲಾ ಸೇರಿ ಒಪ್ಪಿ ಮಾಡಿಕೊಂಡ ಒಟ್ಟು ಕುಟುಂಬದ ಆಸ್ತಿಯ ವಿಭಾಗ ಪತ್ರದ ಕ್ರಮವೇನೆಂದರೆ :

ಆದಾಗಿ ಇದರಡಿ ಷೆಡ್ಯೂಲಿನಲ್ಲಿ ನಮೂದು ಮಾಡಿರುವ ಸ್ವತ್ತುಗಳು 1ನೇಯ ಪಾರ್ಟಿಯಾದ ಶ್ರೀಮತಿ.ಮುನಿಯಮ್ಮನವರ ಯಜಮಾನರು ಹಾಗೂ 3 ರಿಂದ 4ನೇ ಪಾರ್ಟಿಯವರ ತಂದೆಯವರಾದ ಶ್ರೀ.ನರಸಿಂಹಯ್ಯರವರಿಗೆ ಶ್ರೀ.ಬಿಡ್ಡಯ್ಯ ಉರುಫ್ ಗುಡ್ಡಯ್ಯ ಮತ್ತು ಮುನಿಯಮ್ಮನವರಿಂದ ಬೆಂಗಳೂರು ದಕ್ಷಿಣ ತಾಲ್ಲೂಕು ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ 1ನೇ ಪುಸ್ತಕದ, 283ನೇ ಸಂಪುಟ, 90–95ನೇ ಪುಟಗಳಲ್ಲಿ, 2537ನೇ ರಿಜಿಸ್ಟರ್ ನಂಬರಾಗಿ ದಿನಾಂಕ 14.04.1934ರಂದು ರಿಜಿಸ್ಟರು ಆಗಿರುವ ಕ್ರಯಪತ್ರದ ಮೂಲಕ ಬಂದ ಸ್ವತ್ತಾಗಿದ್ದು ಸದರೀ ಶ್ರೀ.ನರಸಿಂಹಯ್ಯರವರು ದಿನಾಂಕ 11.12.1960ರಂದು ದೈವಾಧೀನರಾಗಿದ್ದು ಸದರೀ ನರಸಿಂಹಯ್ಯನವರು ದೈವಾಧೀನರಾದ ನಂತರ ಸದರೀ ಸ್ವತ್ತುಗಳಿಗೆ ನಾವುಗಳೇ ಸಂಪೂರ್ಣ ಹಕ್ಕುದಾರರೂ, ಮಾಲೀಕರೂ ಆಗಿ ಸದರಿ ಸ್ವತ್ತುಗಳ ಖಾತೆ, ಪಹಣಿ, ಮ್ಯುಟೇಶನ್ ವಗೈರೆ

Mof Muniyamma

BNG(U)-3LR(S)/15513/2002-2003 2-20

20 DEC 2002

No. 3182 41

Name Sri/Smt ...

Date 10/1/03

K.C. BASAVE GOWDA
STAMP VENDER
BANGALORE CITY

For want of Rs. 100/- Papers
of Rs 10X10 Rs ... Rs ...
Rs ... Rs ... Rs ...
Issued Jointly.

... ಶುಲ್ಕ ...
... ಶುಲ್ಕ 600/-
... 300/-
... ಶುಲ್ಕ 190/-
... ಶುಲ್ಕ 10/-
... ಶುಲ್ಕ 300/- R.R. 40/-
ಒಟ್ಟು ! 1440/-

... ತಾರೀಖು 10 JAN 2003 ರಂದು
2-1-5 ...
Muniyamma ... ರವರಿಂದ




LTM of Muniyamma



ಬರೆದು ಕೊಟ್ಟುದಾದಿ ಒಪ್ಪಿಕೊಳ್ಳುವಾರು ... ಉಪನೋಂದಣಾಧಿಕಾರಿ,
ಬೆಂಗಳೂರು ದಕ್ಷಿಣ ತಾಲ್ಲೂಕು

LTM of Muniyamma



N. K. Reddy





Muniswe Reddy





ಉಪ-ನೋಂದಣಾಧಿಕಾರಿ

2

10 Rs.

ದಶ ರುಪಯೇ

सत्यमेव जयते

भारत

INDIA

१० रु.

10 RS.

TEN RUPEES

BNG(U)BLR(S)/ 13575 2002-2003
3-20

ದಾಖಲಾತಿಯನ್ನು ಸಂಬಂಧಪಟ್ಟ ಕಛೇರಿಯಲ್ಲಿ ಫವತಿ ತಃಖ್ತೆ ಮೂಲಕ 1ನೇ ಪಾರ್ಟಿಯವರಾದ ಶ್ರೀಮತಿ.ಮುನಿಯಮ್ಮನವರ ಹೆಸರಿನಲ್ಲಿ ದಾಖಲು ಮಾಡಿಸಿಕೊಂಡು ಸದರಿ ಸ್ವತ್ತುಗಳ ಕಂದಾಯವನ್ನು ಸಹಾ ಮುನಿಯಮ್ಮನವರ ಹೆಸರಿನಲ್ಲಿ ಪಾವತಿ ಮಾಡುತ್ತಾ ಸದರಿ ಸ್ವತ್ತುಗಳನ್ನು ನಮ್ಮಗಳ ಇಷ್ಟಾನುಸಾರ ಅನುಭವಿಸಿಕೊಂಡು ಬರುತ್ತಿರುವುದು ಸರಿಯಷ್ಟೆ.

ಈಗ ನಾವುಗಳು ಅನ್ಯೋನ್ಯವಾಗಿರುವಾಗಲೇ ಸದರೀ ಸ್ವತ್ತುಗಳನ್ನು ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ನಮ್ಮ ನಮ್ಮ ವ್ಯವಹಾರ ನಡೆಸಿಕೊಳ್ಳಬೇಕೆಂದು ತೀರ್ಮಾನಿಸಿರುವುದರಿಂದ ಈ ಮೇಲ್ಕಂಡ ಸ್ವತ್ತನ್ನು ನಾವುಗಳು 'ಎ','ಬಿ','ಸಿ' ಮತ್ತು 'ಡಿ' ಎಂದು ನಾಲ್ಕು ಭಾಗಗಳನ್ನು ಮಾಡಿ ಇದರ ಪ್ರಕಾರ ಈ ಕೆಳಗೆ 'ಎ' ಷೆಡ್ಯೂಲು ಸ್ವತ್ತನ್ನು 1ನೇ ಪಾರ್ಟಿಯಾದ ಶ್ರೀಮತಿ.ಮುನಿಯಮ್ಮನವರಿಗೂ, 'ಬಿ' ಷೆಡ್ಯೂಲು ಸ್ವತ್ತನ್ನು 2ನೇ ಪಾರ್ಟಿಯಾದ ಶ್ರೀ.ಎನ್.ಕೃಷ್ಣಾರೆಡ್ಡಿರವರಿಗೂ, 'ಸಿ' ಷೆಡ್ಯೂಲು ಸ್ವತ್ತನ್ನು 3ನೇ ಪಾರ್ಟಿಯಾದ ಶ್ರೀ.ಎನ್.ನರಸಾರೆಡ್ಡಿರವರರಿಗೂ 'ಡಿ' ಷೆಡ್ಯೂಲು ಸ್ವತ್ತನ್ನು 4ನೇ ಪಾರ್ಟಿಯಾದ ಶ್ರೀ.ಅಶ್ವತ್‌ನಾರಾಯಣರೆಡ್ಡಿರವರಿಗೂ ಸೇರುವಂತೆ ನಾವುಗಳು ಹಂಚಿಕೊಂಡಿರುತ್ತೇವೆ ಹಾಗೂ ನಮ್ಮ ನಮ್ಮ ಭಾಗಕ್ಕೆ ಬಂದಿರತಕ್ಕ ಸ್ವತ್ತುಗಳನ್ನು ಈ ದಿನವೇ ನಮ್ಮ ಸ್ವಾಧೀನಕ್ಕೆ ತೆಗೆದುಕೊಂಡಿರುತ್ತೇವೆ. ಹಾಗೂ ಸದರೀ ಸ್ವತ್ತನ್ನು ನಾವು ಯಾರಿಗೂ ಆಧಾರ, ಭೋಗ್ಯ, ವಗ್ಯೆರೆ ಪರಭಾರೆ ಮಾಡಿರುವುದಿಲ್ಲ ಹಾಗೂ ನಾವುಗಳು ಕೊಡಬೇಕಾದ ಸಾಲಗಳಾಗಲೀ ಅಥವಾ ನಮಗೆ ಬರಬೇಕಾದ ಹಣವಾಗಲೀ ಯಾವುದು ಇರುವುದಿಲ್ಲ. ನಾವುಗಳು ಒಬ್ಬರನ್ನು ಬಿಟ್ಟು ಇನ್ನೊಬ್ಬರು ಲೇವಾದೇವಿ ಮಾಡಿದ್ದಲ್ಲಿ ಅವರವರುಗಳು ಮಾಡಿರುವ ಲೇವಾದೇವಿಗಳು ಅವರವರಿಗೆ ಸೇರತಕ್ಕದ್ದು, ಒಂದು ವೇಳೆ ಆಸ್ತಿಗಳನ್ನು ಸಂಪಾದನೆ ಮಾಡಿದ್ದಲ್ಲಿ ಅವರವರುಗಳವರಿಗೇ ಸೇರತಕ್ಕದ್ದೇ ವಿನಹಾ ಒಬ್ಬರ ಆಸ್ತಿಯಲ್ಲಿ ಇನ್ನೊಬ್ಬರಿಗೆ ಯಾವ ತರಹವಾದ ಸಂಬಂಧಗಳೂ ಇರುವುದಿಲ್ಲ.

N. S. Reddy

LTM of Muniyamma

10 DEC 2002

No. 318491 Rs. 10/-
Name Sri/Smt. [illegible]
Date 10.11.02
K.C. BASAVE GOWDA
STAMP VENDER....
BANGALORE CITY

13515

BNG(U)BLR(S)/..............2002-2003 4-20





ಉಪ-ನೋಂದಣಾಧಿಕಾರಿ
ಬೆಂಗಳೂರು ದಕ್ಷಿಣ ತಾಲ್ಲೂಕು


1) Guruva Reddy
N. GURUVAREDDY
No. 431-H, I'B' cross
I'B' Main, 8th Block
Koramangala layout
B'lore -95

2) N. Krishna Reddy
N. KRISHNA REDDY
Chudanayakanahalli
R.T. Nagar Po
Bangalore 560032

ಉಪ-ನೋಂದಣಾಧಿಕಾರಿ
ಬೆಂಗಳೂರು ದಕ್ಷಿಣ ತಾಲ್ಲೂಕು

3

10 Rs.




BNG(U)BLR(S)/ 13315 2002-2003 S-20

ಇನ್ನು ಮುಂದೆ ಅವರವರ ಭಾಗಕ್ಕೆ ಬಂದಿರುವ ಷೆಡ್ಯೂಲ್ ಸ್ವತ್ತುಗಳ ಖಾತೆ ವಗೈರೆ ದಾಖಲಾತಿಗಳನ್ನು ಸಂಬಂಧಪಟ್ಟ ಕಛೇರಿಯಿಂದ ಅವರವರ ಹೆಸರಿಗೆ ಪ್ರತ್ಯೇಕವಾಗಿ ದಾಖಲು ಮಾಡಿಸಿಕೊಂಡು, ಅವರವರ ಭಾಗಕ್ಕೆ ಬಂದಿರುವ ಜಮೀನುಗಳಿಗೆ ಹಾಗೂ ಕಟ್ಟಡ ವಗೈರೆಗಳಿಗೆ ಕಂದಾಯವನ್ನು ಸಹಾ ಅವರವರೇ ಪ್ರತಿ ವರ್ಷ ಸಂಬಂಧಪಟ್ಟ ಕಛೇರಿಗೆ ಅವರವರ ಹೆಸರಿನಲ್ಲಿ ಪಾವತಿ ಮಾಡುತ್ತಾ, ಅವರವರ ಭಾಗಕ್ಕೆ ಬಂದಿರುವ ಷೆಡ್ಯೂಲು ಸ್ವತ್ತುಗಳನ್ನು ಅವರವರ ಇಷ್ಟಾನುಸಾರ ಕ್ರಯ, ದಾನ, ಆಧಾರ, ಭೋಗ್ಯ ವಗೈರೆ ಪರಭಾರೆಯನ್ನು ಮಾಡುವುದಕ್ಕೂ, ಅವರವರ ಭಾಗಕ್ಕೆ ಬಂದಿರುವ ಷೆಡ್ಯೂಲು ಸ್ವತ್ತುಗಳಲ್ಲಿ ಮುಂದೆ ದೊರೆಯಬಹುದಾದ ಜಲ, ತರು, ನಿಧಿ ನಿಕ್ಷೇಪಾಧಿ, ಅಷ್ಟ ಭೋಗ ತೇಜ ಸೌಮ್ಯಂಗಳಿಗೂ ಸಹಾ ಅವರವರೇ ಸಂಪೂರ್ಣ ಹಕ್ಕುದಾರರೂ, ಮಾಲೀಕರೂ ಆಗಿ, ಅವರವರ ಪುತ್ರ ಪೌತ್ರ ವಂಶ ಪಾರಂಪರ್ಯವಾಗಿ ಅವರವರ ಇಷ್ಟಾನುಸಾರ ಸುಖದಿಂದ ಅನುಭವಿಸಿಕೊಂಡು ಬರತಕ್ಕದ್ದು. ಇನ್ನು ಮುಂದೆ ಒಬ್ಬರ ಭಾಗಕ್ಕೆ ಬಂದಿರುವ ಷೆಡ್ಯೂಲ್ ಸ್ವತ್ತಿನ ಮೇಲೆ ಮತ್ತೊಬ್ಬರಿಗೆ ಯಾವ ವಿಧವಾದ ಹಕ್ಕು ಬಾಧ್ಯತೆ ಸಂಬಂಧಗಳು ಲೇಶಮಾತ್ರವು ಏನೂ ಸಹಾ ಇರುವುದಿಲ್ಲ. ಇಲ್ಲಿಂದೀಚಿಗೆ ನಮಗೆ ರಕ್ತ ಸಂಬಂಧವೇ ಹೊರತು ಅರ್ಥ ಸಂಬಂಧಗಳು ಯಾವುದು ಇರುವುದಿಲ್ಲ.

ಇನ್ನು ಮುಂದೆ ಅವರವರ ಭಾಗಕ್ಕೆ ಬಂದಿರುವ ಸ್ವತ್ತುಗಳ ವಿಚಾರವಾಗಿ ಯಾರಿಂದಲಾದರೂ ತಂಟೆ ತಕರಾರುಗಳು ಬಂದರೆ ಅಂತಹ ತಂಟೆ ತಕರಾರುಗಳನ್ನು ಅವರವರೇ ಅವರವರ ಸ್ವಂತ ಖರ್ಚಿನಿಂದ ಪರಿಹರಿಸಿಕೊಳ್ಳತಕ್ಕದ್ದು ಹಾಗೂ ಅವರವರ ಭಾಗಕ್ಕೆ ಬಂದಿರುವ ಸ್ವತ್ತುಗಳಲ್ಲಿ ಯಾರಾದರೂ ಸಾಲ, ಆಧಾರ ಮಾಡಿದಲ್ಲಿ ಅಂತಹ ಸಾಲವನ್ನು ಅವರವರೇ ಅವರವರ ಸ್ವಂತ ಆದಾಯದಿಂದ ಸಂಬಂಧಪಟ್ಟ ಕಛೇರಿಗೆ ಪಾವತಿ ಮಾಡತಕ್ಕದ್ದೇ ವಿನಹಾ ಮತ್ತೊಬ್ಬರಿಗೆ ಸದರಿ ಸಾಲ ಆಧಾರವನ್ನು ತೀರುವಳಿ ಮಾಡುವ ಹಕ್ಕು ಇರುವುದಿಲ್ಲ. ಸದರಿ ಷೆಡ್ಯೂಲು ಸ್ವತ್ತುಗಳ ವಿಚಾರವಾಗಿ ಏನಾದರೂ ತಂಟೆ ತಕರಾರುಗಳು ಬಂದರೆ ಅಂತಹ ತಂಟೆ ತಕರಾರುಗಳನ್ನು ನಮ್ಮ ಕುಟುಂಬದಲ್ಲಿ ಹಿರಿಯರ ಸಮಕ್ಷಮದಲ್ಲಿ ಪರಿಹರಿಸಿಕೊಳ್ಳ ತಕ್ಕದ್ದೆ

M of Muniyamma

Munsa Reddy


10 DEC 2002

No. 31[illegible] Rs. 10[illegible]
Name Sri/Smt. [illegible]
Date 10/[illegible]/02
K.C. BASAVE GOWDA
STAMP VENDER
BANGALORE CITY

13515

BNG(U)BLR(S)/13515 2002-2003 6-20

10 Rs.




BNG(U)BLR(S)/ 13575 2002-2003

7-2003

ವಿನಹಾ ಕೋರ್ಟು ಕಛೇರಿಗೆ ಹೋಗತಕ್ಕದ್ದಲ್ಲ ಎಂಬುದಾಗಿ ನಮ್ಮಗಳ ಖುದ್ದು ಮನೋರಾಜಿಯಿಂದ ಪರಸ್ಪರ ಒಪ್ಪಿ ಮಾಡಿಕೊಂಡ ವಿಭಾಗ ಪತ್ರ ಸಹಿ.

## ಷೆಡ್ಯೂಲ್‌ಗಳ ವಿವರ:

'ಎ' ಷೆಡ್ಯೂಲ್‌ದಾರರಾದ ಶ್ರೀಮತಿ .ಮುನಿಯಮ್ಮ ನವರ ಭಾಗಕ್ಕೆ ಬಂದಿರುವ ಸ್ವತ್ತು ವಿವರ

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ತೂಬರಹಳ್ಳಿ ಗ್ರಾಮಕ್ಕೆ ಸೇರಿದ ಅಮಾನಿ ಬೆಳ್ಳಂಡೂರು ಖಾನೆ, ಸರ್ವೆ ನಂ.323/2ನೇ ನಂಬರಿನಲ್ಲಿರತಕ್ಕ ತರಿ ವಿಸ್ತೀರ್ಣ **1–04** ಗುಂಟೆ (ಒಂದು ಎಕರೆ ನಾಲ್ಕು ಗುಂಟೆ) ಜಮೀನಿಗೆ ಚಕ್ಕುಬಂಧಿಃ

| | | |
|---|---|---|
| ಪೂರ್ವಕ್ಕೆ | : | ಪಟೇಲ್ ಮುನಿಸ್ವಾಮಿಯವರ ಜಮೀನು |
| ಪಶ್ಚಿಮಕ್ಕೆ | : | ಬಿಡ್ಡಯ್ಯ ಉರುಫ್ ಗುಡ್ಡಯ್ಯನ ಜಮೀನು |
| ಉತ್ತರಕ್ಕೆ | : | ರಾಜ ಕಾಲುವೆ |
| ದಕ್ಷಿಣಕ್ಕೆ | : | ಇನಾಂತಿ ಜಮೀನು |

ಈ ಮಧ್ಯೆ ಇರುವ **1** ಎಕರೆ **04** ಗುಂಟೆ ಜಮೀನು 'ಎ' ಷೆಡ್ಯೂಲ್‌ದಾರರಾದ ಶ್ರೀಮತಿ.ಮುನಿಯಮ್ಮನವರ ಭಾಗಕ್ಕೆ ಸೇರತಕ್ಕದ್ದು

'ಎ' ಷೆಡ್ಯೂಲ್‌ದಾರರು [redacted] ಸದರಿ ಜಮೀನಿನಲ್ಲಿ ಬೆಳೆಗಳನ್ನು ಇಟ್ಟು ಕೊಂಡು ಅನುಭವಿಸತಕ್ಕದು [redacted]

M of Muniyamma

20 DEC 2002

No. 3.82.91 Rs. 10/-

Name Sri/Smt. [illegible]

Date 10/1/03

K.C. BASAVE GOWDA

STAMP VENDER

BANGALORE CITY

13515

BNG(U)BLR(S)/13515 2002-2003 8-20

10 Rs.




BNG(U)BLR(S)/13515 2002-2003

9-204

Muniyamma

[redacted] ಇವರ ಕಾಲನಾಂತರ ಸದರಿ ಸ್ವತ್ತು ಮೂರು ಜನ ಭಾಗಸ್ತರಿಗೆ ಮಾತ್ರ ಈ ಪತ್ರದಲ್ಲಿ ವಿವರಿಸಿರುವಂತೆ ಸೇರತಕ್ಕದ್ದು [redacted] ಅಂದರೆ 3 ಜನ ಗಂಡು ಮಕ್ಕಳಿಗೆ ಸೇರತಕ್ಕದ್ದು.

'ಬಿ' ಷೆಡ್ಯೂಲ್‌ದಾರರಾದ ಶ್ರೀ .ಎನ್.ಕೃಷ್ಣರೆಡ್ಡಿಯವರ ಭಾಗಕ್ಕೆ ಬಂದಿರುವ ಸ್ವತ್ತುಗಳ ವಿವರ

**ಐಟಂ .1**

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ತೂಬರಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.**34/2**ನೇ ನಂಬರಿನಲ್ಲಿರತಕ್ಕ ವಿಸ್ತೀರ್ಣ **0–07** ಗುಂಟೆ ದಾರಿ ಖರಾಬು ಜಮೀನು ಸಹಿತವಾದ ಒಟ್ಟು **4** ಎಕರೆ **21** ಗುಂಟೆ ಜಮೀನಿನ ಪೈಕಿ ಮಧ್ಯ ಭಾಗದಲ್ಲಿ ಇರುವ **2–00** ಎಕರೆ ಜಮೀನಿಗೆ ಚಕ್ಕುಬಂಧಿಃ

| | | |
|---|---|---|
| ಪೂರ್ವಕ್ಕೆ | ಃ | ಸಿ ಷೆಡ್ಯೂಲ್‌ದಾರ ಎನ್ ಅಶ್ವಥನಾರಾಯಣರೆಡ್ಡಿರವರ ಜಮೀನು |
| ಪಶ್ಚಿಮಕ್ಕೆ | ಃ | [redacted] ಎನ್. ನರಸಾ ರೆಡ್ಡಿ |
| ಉತ್ತರಕ್ಕೆ | ಃ | ತಿಮ್ಮಯ್ಯ ಮತ್ತು ಬಿಡ್ಡಯ್ಯ ಉರುಫ್ ಗುಡ್ಡಯ್ಯನವರ ಜಮೀನು |
| ದಕ್ಷಿಣಕ್ಕೆ | ಃ | ಹೊಂಗಸಂದ್ರದ ಮುನಿಯಪ್ಪ ಮತ್ತು ಶ್ಯಾನುಭೋಗ ಇನಾಂತಿ ಜಮೀನು |

**ಐಟಂ .2**

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ತೂಬರಹಳ್ಳಿ ಗ್ರಾಮದ ಗ್ರಾಮಠಾಣಕ್ಕೆ ಸೇರಿದ ಖಾನೇಷುಮಾರಿ **30**ನೇ ನಂಬರು ಹೌಸ್‌ಲಿಸ್ಟ್ ನಂ.**10/8** ನಂಬರಿನಲ್ಲಿರತಕ್ಕ ಪೂರ್ವ ಪಶ್ಚಿಮ **76** ಅಡಿಗಳು, ಉತ್ತರ ದಕ್ಷಿಣ **82** ಅಡಿಗಳ ಪೈಕಿ ಪೂರ್ವ ಪಶ್ಚಿಮ **76** ಅಡಿಗಳು , ಉತ್ತರ ದಕ್ಷಿಣ **41** ಅಡಿಗಳ ಅಳತೆಯಲ್ಲಿ ಇರತಕ್ಕ ಮನೆ ಮತ್ತು ನಿವೇಶನಕ್ಕೆ ಚಕ್ಕುಬಂಧಿಃ

LTM of Muniyamma

2 0 DEC 2002

No. 3184/91 Rs. 10/-
Name Sri/Smt ...
Date 10/11/02
K.C. BASAVE GOWDA
STAMP VENDER
BANGALORE CITY

13515

BNG(U) 3LR(S)/ 13515 2002-2003 10-20

7

10 Rs.




13515

BNG(U) 3LR(S)/..............2002-2003

13-20

'ಸಿ' ಷೆಡ್ಯೂಲ್‌ದಾರರಾದ ಶ್ರೀ.ಎನ್.ನರಸಾರೆಡ್ಡಿಯವರಿಗೆ ಭಾಗಕ್ಕೆ ಬಂದಿರುವ ಸ್ವತ್ತುಗಳ ವಿವರ

ಐಟಂ .1

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ತೂಬರಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.**48/3**ನೇ ನಂಬರಿನಲ್ಲಿರತಕ್ಕ ವಿಸ್ತೀರ್ಣ 2 ಎಕರೆ 10 ಗುಂಟೆ ಖರಾಬು ಸೇರಿ **2** ಎಕರೆ **10** ಗುಂಟೆ ಪೂರ್ತಾ ಸ್ವತ್ತಿಗೆ ಚಕ್ಕುಬಂಧಿ :

| | | |
|---|---|---|
| ಪೂರ್ವಕ್ಕೆ | : | ಸಿದ್ಧಾಪುರದ ಗಡಿ |
| ಪಶ್ಚಿಮಕ್ಕೆ | : | ಭಟ್ಟರ ಇನಾಂತಿ ಜಮೀನು |
| ಉತ್ತರಕ್ಕೆ | : | ಲಗುಮಕ್ಕನ ಜಮೀನು |
| ದಕ್ಷಿಣಕ್ಕೆ | : | ಸಿದ್ಧಾಪುರ ಮುನಿವೆಂಕಟಪ್ಪನವರ ಜಮೀನು |

ಐಟಂ 2

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ತೂಬರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.**34/2** ನೇ ನಂಬರಿನಲ್ಲಿ ಇರತಕ್ಕ ಪಶ್ಚಿಮದ ಕಡೆ ಸುಮಾರು **0–10** ಗುಂಟೆ ದಾರಿ ಖರಾಬು ಸೇರಿ ಪೂರ್ವ ಪಶ್ಚಿಮ **81** ಅಡಿ ಅಗಲದಲ್ಲಿ ಬರುವ ಜಮೀನಿಗೆ ಚಕ್ಕುಬಂಧಿಃ

| | | |
|---|---|---|
| ಪೂರ್ವಕ್ಕೆ | : | 'ಬಿ' ಷೆಡ್ಯೂಲ್‌ದಾರ ಕೃಷ್ಣಾರೆಡ್ಡಿರವರ ಭಾಗದ ಜಮೀನು |
| ಪಶ್ಚಿಮಕ್ಕೆ | : | ತೋಟಿ ಮುತ್ತುಗನ ಜಮೀನು |
| ಉತ್ತರಕ್ಕೆ | : | ಬಿಡ್ಡಪ್ಪ ಮತ್ತು ಕೊಂಡಪ್ಪನವರ ಜಮೀನು |
| ದಕ್ಷಿಣಕ್ಕೆ | : | ಬಿಡ್ಡಪ್ಪ ಮತ್ತು ಶ್ಯಾನಭೋಗರ ಇನಾಂತಿ ಜಮೀನು |

M. Muniyamma

20 DEC 2002

No. 3182/91 Rs. 10/-
Name Sri/Smt. ...
Date 10/1/03
K C BASAVE GOWDA
STAMP VENDER
BANGALORE CITY

13515
BNG(U)BLR(S)/ 13515 2002-2003 14-20

8

10 Rs.




BNG(U)3LR(S)/ 13515 2002-2003

15-20

ಐಟಂ.3

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ತೂಬರಹಳ್ಳಿ ಗ್ರಾಮಕ್ಕೆ ಸೇರಿದ ಅಮಾನಿ ಬೆಳ್ಳಂಡೂರು ಖಾನೆಯ ಸರ್ವೆ ನಂ.**323/2** ರಲ್ಲಿ ಒಟ್ಟು **1** ಎಕರೆ **04** ಗುಂಟೆ ತರಿ ಜಮೀನಿನ ಪೈಕಿ **0–14** ಗುಂಟೆ ತರಿ ಜಮೀನಿಗೆ ಚಕ್ಕುಬಂಧಿಃ

| | | |
|---|---|---|
| ಪೂರ್ವಕ್ಕೆ | ಃ | ಪಟೇಲ್ ಮುನಿಸ್ವಾಮಿಯವರ ತೋಟ |
| ಪಶ್ಚಿಮಕ್ಕೆ | ಃ | ಎನ್. ಅಶ್ವಥ್‌ನಾರಾಯಣರೆಡ್ಡಿಯವರ ಭಾಗದ ಜಮೀನು |
| ಉತ್ತರಕ್ಕೆ | ಃ | ರಾಜ ಕಾಲುವೆ |
| ದಕ್ಷಿಣಕ್ಕೆ | ಃ | ಇನಾಂತಿ ಜಮೀನು |

ಈ ಮೇಲ್ಕಂಡ ~~ಮೂರು~~ ಎರಡು ಐಟಂ ಸ್ವತ್ತುಗಳು 'ಸಿ' ಷೆಡ್ಯೂಲ್‌ದಾರರಿಗೆ ಸೇರತಕ್ಕದ್ದು

'ಡಿ' ಷೆಡ್ಯೂಲ್‌ದಾರರಾದ ಶ್ರೀ.ಎನ್.ಅಶ್ವಥ್‌ನಾರಾಯಣರೆಡ್ಡಿಯವರ ಭಾಗಕ್ಕೆ ಸೇರತಕ್ಕ ಸ್ವತ್ತುಗಳ ವಿವರ

ಐಟಂ.1

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ತೂಬರಹಳ್ಳಿ ಗ್ರಾಮದಲ್ಲಿರುವ ಸರ್ವೆ ನಂ.**34/2** ರಲ್ಲಿ ಒಟ್ಟು **4** ಎಕರೆ **21** ಗುಂಟೆ ಜಮೀನಿನ ಪೈಕಿ ಪೂರ್ವದ ಕಡೆ **2** ಎಕರೆ **10** ಗುಂಟೆ ಜಮೀನು ಖರಾಬು ಸೇರಿ ಜಮೀನಿಗೆ ಚಕ್ಕುಬಂಧಿಃ

| | | |
|---|---|---|
| ಪೂರ್ವಕ್ಕೆ | ಃ | ಭಟ್ಟರ ಇನಾಂತಿ ಜಮೀನು |
| ಪಶ್ಚಿಮಕ್ಕೆ | ಃ | ಎನ್.ಕೃಷ್ಣಾರೆಡ್ಡಿರವರ ಭಾಗದ ಜಮೀನು |
| ಉತ್ತರಕ್ಕೆ | ಃ | ಬಿಡ್ಡಯ್ಯ ಉರುಫ್ ಗುಡ್ಡಯ್ಯ ಮತ್ತು ಕೃಷ್ಣಾರೆಡ್ಡಿರವರ ಜಮೀನು |
| ದಕ್ಷಿಣಕ್ಕೆ | ಃ | ಹೊಂಗಸಂದ್ರದ ಮುನಿಯಪ್ಪ ಮತ್ತು ಸರ್ವೆ ನಂ.46ರ ಜಮೀನು |

Mansa Reddy

No. 3182 91 Rs. 10

Name Sri/Smt.

Date 10/11/02

K.C. BASAVE GOWDA

STAMP VENDER

BANGALORE CITY

13515

BNG(U)BLR(S)/............2002-2003 16-20

9

10 Rs.

दस रुपये

सत्यमेव जयते

भारत

INDIA

१० रु. TEN RUPEES 10 Rs.

13515

BNG(U)BLR(S)/..........2002-2003 17-20

ಐಟಂ 2

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ತೂಬರಹಳ್ಳಿ ಗ್ರಾಮದ ಗ್ರಾಮಠಾಣಕ್ಕೆ ಸೇರಿದ ಖಾನೇಷುಮಾರಿ 30ನೇ ನಂಬರು ಹೌಸ್ ಲಿಸ್ಟ್ ನಂ.10/8 ನೇ ನಂಬರಿನಲ್ಲಿರತಕ್ಕ ಪೂರ್ವ ಪಶ್ಚಿಮ 76 ಅಡಿಗಳು ಮತ್ತು ಉತ್ತರ ದಕ್ಷಿಣ 82 ಅಡಿಗಳ ಅಳತೆಯ ಪೈಕಿ ಪೂರ್ವ ಪಶ್ಚಿಮ 76 ಅಡಿಗಳು ಹಾಗೂ ಉತ್ತರ ದಕ್ಷಿಣ 41 ಅಡಿಗಳ ಅಳತೆಯಲ್ಲಿ ಕಟ್ಟಿರತಕ್ಕ ಮನೆ ಮತ್ತು ಖಾಲಿ ನಿವೇಶನಕ್ಕೆ ಚಕ್ಕುಬಂಧಿ :

| | | |
|---|---|---|
| ಪೂರ್ವಕ್ಕೆ | : | ಅಯ್ಯಪ್ಪನವರ ಮನೆ |
| ಪಶ್ಚಿಮಕ್ಕೆ | : | ದಾರಿ |
| ಉತ್ತರಕ್ಕೆ | : | ದಾರಿ ಮತ್ತು ಎನ್.ಪಾ. ನಾರಾಯಣರೆಡ್ಡಿಯವರ ಮನೆ |
| ದಕ್ಷಿಣಕ್ಕೆ | : | ಎನ್. ಕೃಷ್ಣಾರೆಡ್ಡಿಯವರ ಭಾಗದ ಮನೆ ಮತ್ತು ಖಾಲಿ ಜಾಗ |

ಐಟಂ .3

ಬೆಂಗಳೂರು ಪೂರ್ವ ತಾಲ್ಲೂಕು, ವರ್ತೂರು ಹೋಬಳಿ, ತೂಬರಹಳ್ಳಿ ಗ್ರಾಮಕ್ಕೆ ಸೇರಿದ ಅಮಾನಿ ಬೆಳ್ಳಂಡೂರು ಖಾನೆಯ ಸರ್ವೆ ನಂ.323/2 ರಲ್ಲಿ ಒಟ್ಟು 1 ಎಕರೆ 04 ಗುಂಟೆ ತರಿ ಜಮೀನಿನ ಪೈಕಿ ಮಧ್ಯ ಭಾಗದಲ್ಲಿರುವ 0-15 ಗುಂಟೆ ಜಮೀನಿಗೆ ಚಕ್ಕುಬಂಧಿ:

| | | |
|---|---|---|
| ಪೂರ್ವಕ್ಕೆ | : | ನರಸಾರೆಡ್ಡಿಯವರ ಭಾಗದ ಜಮೀನು |
| ಪಶ್ಚಿಮಕ್ಕೆ | : | ಎನ್. ಕೃಷ್ಣಾರೆಡ್ಡಿಯವರ ಭಾಗದ ಜಮೀನು |
| ಉತ್ತರಕ್ಕೆ | : | ರಾಜ ಕಾಲುವೆ |
| ದಕ್ಷಿಣಕ್ಕೆ | : | ಇನಾಂತಿ ಜಮೀನು |

ಈ ಮೇಲ್ಕಂಡ ಮೂರು ಎರಡು ಸ್ವತ್ತುಗಳು 'ಡಿ' ಷೆಡ್ಯೂಲ್ ದಾರರಾದ ಭಾಗಕ್ಕೆ ಸೇರತಕ್ಕದ್ದು

Munisa Reddy

M of Muniyamma

2 0 DEC 2002

No. 3L8L191 Rs. 101
Name Sri/Smt. 
Date 10.11.02
K. C. BASAVE GOWDA
STAMP VENDER
BANGALORE CITY

13515

BNG(U)3LR(S)/............2002-2003

18-20

10

10 RS.




13515

BNG(U)BLR(S)/13515 2002-2003

19-20

ಈ ವಿಭಾಗ ಪತ್ರವನ್ನು ನಾವುಗಳೆಲ್ಲರೂ ಓದಿ ಚೆನ್ನಾಗಿ ಅರ್ಥ ಮಾಡಿಕೊಂಡು ನಮ್ಮ ಆತ್ಮ ಸಂತೋಷದಿಂದ ಒಪ್ಪಿ ಕೆಳಕಂಡ ಸಾಕ್ಷಿದಾರರ ಸಮಕ್ಷಮದಲ್ಲಿ ಈ ವಿಭಾಗ ಪತ್ರಕ್ಕೆ ನಾವುಗಳು ಸಹಿ ಮಾಡಿರುತ್ತೇವೆ.

ಸಾಕ್ಷಿದಾರರು

1. (signature)
N. GURUVA REDDY
No. 431-H, I B' cross
I B' Main, 8th Block
Koramangala Layout
B'lore-95

2. (signature)
N. KRISHNA REDDY
Chidanandakoundahalli
R.T. Nagar Po
Bangalore 560032

3) V. Muni Reddy
Kundalahalli Gate
B'Lore 37

1. (thumb impression) LTM of Muniyamma
ಮುನಿಯಮ್ಮ
All impression Attested by me
(signature)

2. N. K. Reddy
ಎನ್.ಕೃಷ್ಣರೆಡ್ಡಿ

3. (signature)
ಎನ್.ನರಸಾರೆಡ್ಡಿ

4. (signature)
ಎನ್.ಅಶ್ವಥ್‌ನಾರಾಯಣ ರೆಡ್ಡಿ

ವಿಭಾಗ ಮಾಡಿಕೊಂಡವರು

ಕರಡನ್ನು ತಯಾರಿಸಿದವರು
(signature)
R.T. NAGARAJ
No. 6/93-94

No. 3182 ... Rs. 10/-
Name Sri/Smt.......
Date ... 10/1/03
K.C. BASAVE GOWDA
STAMP VENDER....
BANGALORE CITY

26 DEC 2002

13515
BNG(U)BLR(S)/..........2002-2003 20-20

Certificate under Section 41 of the Karnataka Stamp Act 1957

I here by certified that on production of the original Doct. I have Satisfiedmyself that the Stamp duty of Rs. 2500 has been paid there on vide Doct. No........ Volume..........
Pages............. Book..... I .....Dated... 10/1/03

Sub-Registrar
Bangalore South Taluk

Seal of the Sub-Registrar of Bangalore South Taluk

Seal of the Sub Registrar Bangalore (South)

ಈ ದಸ್ತಾವೇಜು 1ನೇ ಪುಸ್ತಕದಲ್ಲಿ 13515/02-03
ನೇ ಸಂಖ್ಯೆಯಾಗಿ ನೋಂದಾಯಿಸಿದ್ದು 95 ನೇ ಸಂಖ್ಯೆಯ
ಸಿ.ಡಿ. ಯಲ್ಲಿ ದಾಖಲಾಗಿದೆ.
ದಿನಾಂಕ: 21-01-03
ಹಿರಿಯ ಉಪ ನೋಂದಣಾಧಿಕಾರಿ
ಬೆಂಗಳೂರು ದಕ್ಷಿಣ ತಾಲ್ಲೂಕು